ಸೂಚನೆ : 1. ಸೋಯಬೆಳೆಯಲ್ಲಿ ಪ್ರಮಾಣಿತ ಬೀಜ ಲಭ್ಯವಿರುವುದರಿಂದ ನಿಜ ಚೀಟಿ ಬೀಜ ಪರಿಗಣಿಸಿರುವುದಿಲ್ಲ.

2. ನೆಲಗಡಲೆ ಬೆಳೆಯಲ್ಲಿ ಐಸೋಪಾಮ್ ಯೋಜನೆಯಂತೆ ರಿಯಾಯಿತಿ ನೀಡಲಾಗಿದೆ.

3. ಪ್ರತಿ ಕೆ.ಜಿ. ರಿಯಾಯಿತಿ ದರವನ್ನು ಹತ್ತಿರದ ರೂಪಾಯಿಗೆ ನಿಗದಿಪಡಿಸಿದೆ.

1341 (1514) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ಹಾನಿಯನ್ನು ಹಾಗೂ ಕ್ರಿಮಿ ಕೀಟವನ್ನು ತಡೆಯಲು ರೈತರಿಗೆ ಯಾವ ಯಾವ ರೀತಿಯ ಔಷಧಿಯನ್ನು ಸರ್ಕಾರದ ವತಿಯಿಂದ ವಿತರಿಸಲಾಗುತ್ತಿದೆ ;

ಆ) ಈ ಔಷಧಿಗಳಿಗೆ ಸರ್ಕಾರದ ವತಿಯಿಂದ ದೊರೆಯುವ ರಿಯಾಯಿತಿ ಎಷ್ಟು ;

ಇ) ಈ ಔಷಧಿಗಳ ಮೂಲ ಬೆಲೆ ಎಷ್ಟು ;

ಈ) ಈ ಔಷಧಿಗಳು ರೈತರಿಗೆ ಸುಲಭವಾಗಿ ದೊರೆಯುವಂತಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಬಂಡೆಪ್ಪ ಕಾಶಂಪುರ್ (ಕೃಷಿ ಸಚಿವರು) –

ಅ) ವಿವಿಧ ಬೆಳೆಗಳಿಗೆ ಬೀಳುವ ರೋಗ ಮತ್ತು ಕೀಟಗಳ ಹತೋಟಿಗೆ ಕೀಟನಾಶಕಗಳು, ಶಿಲೀಂದ್ರನಾಶಕಗಳು, ಜೈವಿಕ ಪೀಡೆ ನಾಶಕಗಳನ್ನು, ಕಳೆಗಳ ಹತೋಟಿಗೆ ಕಳೆನಾಶಕಗಳನ್ನು ಮತ್ತು ಇಲಿ ನಾಶಕಗಳನ್ನು ಇವೇ ಮೊದಲಾದವುಗಳನ್ನು ರಿಯಾಯಿತಿದರಲ್ಲಿ ನೀಡಲಾಗುತ್ತಿದೆ.

ಆ) ಶೇ.50ರಂತೆ ಗರಿಷ್ಠ ಹೆಕ್ಟೇರ್‌ಗೆ ರೂ.500/ರಂತೆ

ಇ) ಕರ್ನಾಟಕ ಪಾರದರ್ಶಕ ಕಾಯಿದೆಯನ್ವಯ ಟೆಂಡರ್ ಕರೆದು ಕನಿಷ್ಠ ದರ ನಿಗಧಿಪಡಿಸಿರುತ್ತದೆ.

ಈ) ಇವುಗಳನ್ನು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಿ ವಿತರಿಸಲಾಗುತ್ತಿದೆ.

1342 (1515) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳೆಷ್ಟು ;

ಆ) ಈ ಕೊಳವೆ ಬಾವಿಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ದುರಸ್ಥಿ ಮಾಡಲಾಗಿದೆ ಹಾಗೂ ಎಷ್ಟು ಕೊಳವೆ ಬಾವಿಗಳನ್ನು ದುರಸ್ಥಿ ಮಾಡಿರುವುದಿಲ್ಲ;

ಇ) ದುರಸ್ತಿ ಮಾಡದಿರುವ ಕೊಳವೆ ಬಾವಿಗಳನ್ನು ಯಾವಾಗ ದುರಸ್ಥಿ ಮಾಡಲಾಗುವುದು;

ಈ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗುವುದೇ ;

ಉ) ಇಲ್ಲದಿದ್ದಲ್ಲಿ, ಯಾವಾಗ ಕೊರೆಸಲಾಗುವುದು; ಎಲ್ಲೆಲ್ಲಿ, ಕೊರೆಸಲಾಗುವುದು ?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು) –

ಅ) 32,485

ಆ) ದುರಸ್ಥಿಗೊಳಗಾಗಿರುವ ಕೊಳವೆ ಬಾವಿಗಳ ದೂರು ನೊಂದಣಿಯಾದ ತಕ್ಷಣ ಸ್ಥಳೀಯ ಗ್ರಾಮ ಪಂಚಾಯತ್‌ಗಳು ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುತ್ತವೆ.

ಇ) ದುರಸ್ಥಿ ಮಾತ್ರವಲ್ಲದೆ, ನೀರಿನ ಗುಣಮಟ್ಟದ ಸಮಸ್ಯೆ ಮತ್ತು ಜಲಮೂಲದ ಇಳುವರಿ ಕೊರತೆಯಿದ್ದಲ್ಲಿ, ತಾಂತ್ರಿಕ ಕಾರ್ಯಸಾಧುತ್ವದನ್ವಯ ಆದ್ಯತೆ ಮೇಲೆ ಪಂಚಾಯತ್ ರಾಜ್ ಸಂಸ್ಥೆಗಳು ಅವುಗಳ ಪುನಃಶ್ಚೇತನಕ್ಕೆ ಕ್ರಮ ವಹಿಸುತ್ತವೆ.

ಈ) ಮತ್ತು ಉ) ವಾಸ್ತವಿಕ ಅವಶ್ಯಕತೆ ಆಧರಿಸಿ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳು ಸಿದ್ಧಪಡಿಸುವ ಕ್ರಿಯಾ ಯೋಜನೆಯನ್ವಯ ಬಹಳ ಅಗತ್ಯವಿದ್ದಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯಿಸಲಾಗುವುದು.

1343 (1517) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತ್ಯೋದಯ ಅನ್ನ ಯೋಜನೆ ಪದ್ಧತಿಯನ್ನು ರಾಜ್ಯದಲ್ಲಿ ಯಾವಾಗ ಜಾರಿಗೆ ತರಲಾಯಿತು ;

ಆ) ಈ ಯೋಜನೆಯ ಉಪಯೋಗವೇನು ;

ಇ) ಈ ಯೋಜನೆಗೆ ಫಲಾನುಭವಿಗಳನ್ನು ಯಾವ ರೀತಿ ಆಯ್ಕೆ ಮಾಡಲಾಗುವುದು ;